ಮೇಲೆ ಇಬ್ಬರೂ ಅಡ್ಡಾದೆವು.

ಅದು ನಡು ಮಧ್ಯಾಹ್ನವಾಗಿತ್ತು. ಊಟವಾಗಿ ಸಾಕಷ್ಟು ಹೊತ್ತಾಗಿತ್ತು. ವಿಪರೀತ ಸೆಕೆಯ ದಿನವದು. ಬಿಸಿಲು ಒಳ ಬೀಳದಂತೆ ಕಿಟಕಿಯನ್ನು ಮುಚ್ಚಿದ ರಿಚಿ, ಬಾಗಿಲನ್ನು ಹಾಕಿದ. ಕೋಣೆಯಲ್ಲಿ ತಂಪು ಹರಡಿಕೊಳ್ಳತೊಡಗಿತು. ಛಾವಣಿಯಲ್ಲಿನ ಫ್ಯಾನು ಕಟಕಟ ಸದ್ದು ಮಾಡುತ್ತಾ ತಿರುಗುತ್ತಿತ್ತು. ಮುಚ್ಚಿದ ಕಿಟಕಿಯ ಮೂಲಕ ಹೊರಗಡೆ ಹಕ್ಕಿಯೊಂದು ಕೂಗುತ್ತಿರುವುದು ಕೇಳಿಸುತ್ತಿತ್ತು. ದೂರದಲ್ಲಿ ಬೀದಿ ವ್ಯಾಪಾರಿಯೊಬ್ಬ "ಹಳೆ ಪೇಪರ್, ಬಾಟಲಿ, ಬಟ್ಟೆ ಇದ್ದರೆ ತೊಗೋತೀವಿ" ಎಂದು ಕೂಗುತ್ತಿದ್ದ. ಯಾರದೋ ಮನೆಯ ಕೆಲಸದವಳು ಬಟ್ಟೆಗಳನ್ನು ಮರದ ಬ್ಯಾಟಿಂದ ರಭಸವಾಗಿ ಬಡಿಯುತ್ತಾ ಒಗೆಯುವ ಸದ್ದು ಕಿವಿಗೆ ಅಪ್ಪಳಿಸುತ್ತಿತ್ತು.

ರಿಚಿ ನಿದ್ದೆಗೆ ಜಾರಿದ. ಅವನ ತಲೆ ನನ್ನ ತೊಡೆಯ ಮೇಲಿದ್ದರೆ, ಅವನ ಕಾಮಿಕ್ ಪುಸ್ತಕ ಅವನ ಎದೆಯ ಮೇಲಿತ್ತು. ಅವನೆಡೆಗೆ ಪ್ರೀತಿಯಿಂದ ನೋಡಿದೆ. ಅವನು ಅತ್ಯಂತ ಪ್ರಶಾಂತವದನನಾಗಿ ಕಂಡ. ನಿದ್ದೆಯಲ್ಲಿ ಕಂಡ ಸೊಗಸಾದ ಕನಸಿನಿಂದಾಗಿಯೋ, ಅಥವಾ ನಾನು ಹಗೂರಕ್ಕೆ ಅವನ ಗುಂಗುರು ಕೂದಲಿನಲ್ಲಿ ಬೆರಳುಗಳನ್ನು ಆಡಿಸುತ್ತಿದ್ದ

